ಕರ್ನಾಟಕ ಸರ್ಕಾರ
ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ
ಉಪನಿರ್ದೇಶಕರು (ಗ್ರಾಕೈ) ರವರ ಕಛೇರಿ, ಜಿಲ್ಲಾ ಪಂಚಾಯುತ್,
ಜಿಲ್ಲಾ ಕೈಗಾರಿಕಾ ಕೇಂದ್ರ ಕಟ್ಟಡ, ಕೋಲಾರ-563101
ದೂರವಾಣಿ ಸಂಖ್ಯೆ: 08152- 222819 E-mail:ddkvi-kolar@karnatakaindustry.gov.in
ddkviklr@gmail.com

ಸಂ:ಕೋ.ಜಿಪಂ/ಉನಿ(ಗ್ರಾ.ಕೈ)/ಜಿವಯೋ/ಆನ್‌ಲೈನ್ ಅರ್ಜಿ/2025-26/ಮು ದಿನಾಂಕ: 6.10.2025

ರವರಿಗೆ,

ಜಿಲ್ಲಾ ಮಾಹಿತಿ ಅಧಿಕಾರಿಗಳು, ಎನ್.ಐ.ಸಿ,
ಜಿಲ್ಲಾ ಆಡಳಿತ ಭವನ,
ಕೋಲಾರ ಜಿಲ್ಲೆ.

ಮಾನ್ಯರೇ,

ವಿಷಯ: 2025-26 ನೇ ಸಾಲಿನಲ್ಲಿ ಜಿಲ್ಲಾ ವಲಯ ಯೋಜನೆಗಳಡಿ ಫಲಾನುಭವಿಗಳನ್ನು ಆಯ್ಕೆ ಮಾಡಲು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸುವ ಕುರಿತು.

ಉಲ್ಲೇಖ:1) ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿ.ಪಂ., ಕೋಲಾರ ರವರ ಅನುಮೋದನೆ ದಿನಾಂಕ: 13.06.2025.
2) ಕೇಂದ್ರ ಕಛೇರಿ ಪತ್ರ ಸಂಖ್ಯೆ:ಕೈವಾಇ/ಜಿಕೈಕೇ/ಇ-1094622/2023-24 ದಿನಾಂಕ: 07/09/2023.

*******

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರಲ್ಲಿ ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿ.ಪಂ., ಕೋಲಾರ ರವರು ಅನುಮೋದಿಸಿರುವಂತೆ ಹಾಗೂ ಉಲ್ಲೇಖ (2) ರ ಪತ್ರದಲ್ಲಿ ಕೇಂದ್ರ ಕಛೇರಿಯಿಂದ ಸೂಚಿಸಿರುವಂತೆ, 2025-26 ನೇ ಸಾಲಿನ ಜಿಲ್ಲಾ ವಲಯದ (1) ವೃತ್ತಿಪರ ಕುಶಲಕರ್ಮಿಗಳಿಗೆ ಉಚಿತವಾಗಿ ಸುಧಾರಿತ ಸಲಕರಣೆ ಸರಬರಾಜು ಯೋಜನೆಯಡಿ, ವಿವಿಧ ಕಸುಬುಗಳಲ್ಲಿ ತೊಡಗಿರುವ, ಗ್ರಾಮೀಣ ಪ್ರದೇಶದ ಅನುವಂಶಿಕ ಕುಶಲಕರ್ಮಿಗಳಿಗೆ ವಿದ್ಯುತ್‌ಚಾಲಿತ ಬಡಗಿ ಉಪಕರಣ ಹಾಗೂ ವಿವಿಧ ಕಸುಬು(ಗಾರೆ, ಕ್ಷೌರಿಕ, ಕುಲುಮೆ, ಕಲ್ಲುಕುಟುಕ & ದೋಬಿ)ಗಳ ಸುಧಾರಿತ ಉಪಕರಣಗಳು ಹಾಗೂ (2) ಜಿಲ್ಲಾ ಉದ್ಯಮ ಕೇಂದ್ರ ಯೋಜನೆಯಡಿ, ಜಿಲ್ಲೆಯ ಗ್ರಾಮೀಣ ಪ್ರದೇಶದ ವೃತ್ತಿನಿರತ ಮಹಿಳಾ ಕುಶಲಕರ್ಮಿಗಳಿಗೆ ವಿದ್ಯುತ್‌ಚಾಲಿತ ಹೊಲಿಗೆ ಯಂತ್ರಗಳನ್ನು ವಿತರಣೆಗಾಗಿ ವೆಬ್‌ಸೈಟ್: www.kolar.nic.in ಮೂಲಕ ಗ್ರಾಮೀಣ ಪ್ರದೇಶದ ಅರ್ಹ ಅಭ್ಯರ್ಥಿಗಳಿಗೆ ಅರ್ಜಿ ಸಲ್ಲಿಸಲು ಅನುವು ಮಾಡಿ ಕೊಡಬೇಕೆಂದು ತಿಳಿಸಿದೆ.

ತಮ್ಮ ನಂಬುಗೆಯ

ಉಪ ನಿರ್ದೇಶಕರು (ಗ್ರಾ.ಕೈ)
ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ
ಜಿ.ಪಂ, ಕೋಲಾರ

ಕರ್ನಾಟಕ ಸರ್ಕಾರ
ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ
ಉಪನಿರ್ದೇಶಕರು (ಗ್ರಾಕೈ) ರವರ ಕಛೇರಿ, ಜಿಲ್ಲಾ ಪಂಚಾಯುತ್,
ಜಿಲ್ಲಾ ಕೈಗಾರಿಕಾ ಕೇಂದ್ರ ಕಟ್ಟಡ, ಕೋಲಾರ-563101
ದೂರವಾಣಿ ಸಂಖ್ಯೆ: 08152-222819 E-mail:ddkvi-kolar@karnatakaindustry.gov.in
ddkviklr@gmail.com

ಸಂ:ಕೋ.ಜಿಪಂ/ಉನಿ(ಗ್ರಾ.ಕೈ)/ಜಿವಯೋ/ಆನ್‌ಲೈನ್‌ಅರ್ಜಿ/2025-26 ದಿನಾಂಕ:

## ಅಧಿಸೂಚನೆ

2025-26 ನೇ ಸಾಲಿನ ಜಿಲ್ಲಾ ವಲಯದ (1) ವೃತ್ತಿಪರ ಕುಶಲಕರ್ಮಿಗಳಿಗೆ ಉಚಿತವಾಗಿ ಸುಧಾರಿತ ಸಲಕರಣೆ ಸರಬರಾಜು ಯೋಜನೆಯಡಿ, ವಿವಿಧ ಕಸುಬುಗಳಲ್ಲಿ ತೊಡಗಿರುವ, ಗ್ರಾಮೀಣ ಪ್ರದೇಶದ ಅನುವಂಶಿಕ ಕುಶಲಕರ್ಮಿಗಳಿಗೆ ವಿದ್ಯುತ್‌ಚಾಲಿತ ಬಡಗಿ ಉಪಕರಣ ಹಾಗೂ ವಿವಿಧ ಕಸುಬು(ಗಾರೆ, ಕ್ಷೌರಿಕ, ಕುಲುಮೆ, ಕಲ್ಲುಕುಟುಕ & ದೋಬಿ)ಗಳ ಸುಧಾರಿತ ಉಪಕರಣಗಳು ಹಾಗೂ (2) ಜಿಲ್ಲಾ ಉದ್ಯಮ ಕೇಂದ್ರ ಯೋಜನೆಯಡಿ, ಜಿಲ್ಲೆಯ ಗ್ರಾಮೀಣ ಪ್ರದೇಶದ ವೃತ್ತಿನಿರತ ಮಹಿಳಾ ಕುಶಲಕರ್ಮಿಗಳಿಗೆ ವಿದ್ಯುತ್‌ಚಾಲಿತ ಹೊಲಿಗೆ ಯಂತ್ರಗಳನ್ನು ವಿತರಿಸಬೇಕಾದ್ದರಿಂದ, ಈ ಕೆಳಗಿನಂತೆ ಗುರಿ ನಿಗದಿಪಡಿಸಿ, ದಿನಾಂಕ: ರಿಂದ ದಿನಾಂಕ: ರವರೆಗೆ ವೆಬ್‌ಸೈಟ್: www.kolar.nic.in ಮುಖಾಂತರ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

| ಕ್ರ.ಸಂ. | ಯೋಜನೆ | ಉಪಕರಣಗಳ ವಿವರ |
|---|---|---|
| 01 | ವೃತ್ತಿಪರ ಕುಶಲಕರ್ಮಿಗಳಿಗೆ ಉಚಿತವಾಗಿ ಸುಧಾರಿತ ಸಲಕರಣೆ ಸರಬರಾಜು ಯೋಜನೆ | ವಿದ್ಯುತ್‌ಚಾಲಿತ ಬಡಗಿ ಉಪಕರಣ ಹಾಗೂ ಗಾರೆ, ಕ್ಷೌರಿಕ, ಕುಲುಮೆ, ಕಲ್ಲುಕುಟುಕ & ದೋಬಿ ಕಸುಬುಗಳ ಸುಧಾರಿತ ಉಪಕರಣ |
| 02 | ಜಿಲ್ಲಾ ಉದ್ಯಮ ಕೇಂದ್ರ ಯೋಜನೆ | ವಿದ್ಯುತ್ ಚಾಲಿತ ಹೊಲಿಗೆ ಯಂತ್ರ |

**ಅರ್ಹತೆಗಳು:**

- ವಿದ್ಯುತ್ ಚಾಲಿತ ಹೊಲಿಗೆ ಯಂತ್ರ ಪಡೆಯುವುದಕ್ಕಾಗಿ ಕೋಲಾರ ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿ ವಾಸವಿರುವ ಮಹಿಳಾ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸತಕ್ಕದ್ದು.
- ಅರ್ಜಿ ಸಲ್ಲಿಸುವ ಅಭ್ಯರ್ಥಿಯ ವಯಸ್ಸು ಕನಿಷ್ಠ 18 ವರ್ಷ ಹಾಗೂ ಗರಿಷ್ಠ 45 ವರ್ಷಗಳು ಇರತಕ್ಕದ್ದು. (ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕದಂದು)
- ಅರ್ಜಿದಾರರು ಕನಿಷ್ಠ ಓದು ಬರಹ ಬಲ್ಲವರಾಗಿರಬೇಕು.
- ಒಂದು ಕುಟುಂಬಕ್ಕೆ ಒಂದು ಅರ್ಜಿ ಸಲ್ಲಿಸಲು ಮಾತ್ರ ಅವಕಾಶವಿರುತ್ತದೆ.
- ಸರ್ಕಾರದ ಯಾವುದೇ ಯೋಜನೆಯಡಿ ಈಗಾಗಲೇ ಹೊಲಿಗೆಯಂತ್ರ/ಸುಧಾರಿತ ಉಪಕರಣವನ್ನು ಪಡೆದಿರುವ ಫಲಾನುಭವಿಗಳು ಅರ್ಜಿ ಸಲ್ಲಿಸಲು ಅರ್ಹವಿರುವುದಿಲ್ಲ.
- ಸರ್ಕಾರಿ ನೌಕರರು ಅಥವಾ ಅವರ ಅವಲಂಭಿತರು ಅರ್ಜಿ ಸಲ್ಲಿಸಲು ಅರ್ಹವಿರುವುದಿಲ್ಲ.
- www.kolar.nic.in ವೆಬ್‌ಸೈಟ್‌ನಲ್ಲಿ https://kolar.nic.in/en/notice_category/announcements/ ಲಿಂಕ್ ಮುಖಾಂತರ ಅವಶ್ಯ ಮಾಹಿತಿ ಭರ್ತಿ ಮಾಡಿ ಮತ್ತು ಸಂಬಂಧಿಸಿದ ದಾಖಲೆಗಳ ಸ್ವಯಂ ದೃಢೀಕೃತ ಪ್ರತಿಗಳು ಅಪ್ಲೋಡ್ ಮಾಡುವ ಮೂಲಕ ನಿಗದಿತ ದಿನಾಂಕದೊಳಗಾಗಿ ಅರ್ಜಿ ಸಲ್ಲಿಸುವುದು.
- ಅಪ್‌ಲೋಡ್ ಮಾಡಬೇಕಾದ ದಾಖಲೆಗಳು, (ಸ್ವಯಂ ದೃಢೀಕೃತ ಪ್ರತಿಗಳು)
  1) ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ (in JPG format).
  2) ಜನ್ಮ ದಿನಾಂಕ ನಮೂದಿಸಿರುವ ದಾಖಲೆ (ವರ್ಗಾವಣೆ ಪ್ರಮಾಣ ಪತ್ರ/ ಎಸ್.ಎಸ್.ಎಲ್.ಸಿ. ಅಂಕಪಟ್ಟಿ/ ಇನ್ನಿತರ ಪತ್ರ) (in PDF format).
  3) ಜಾತಿ/ಆದಾಯ ಪ್ರಮಾಣ ಪತ್ರ (in PDF format).
  4) ಬಿ.ಪಿ.ಎಲ್. ಪಡಿತರ ಚೀಟಿ (in PDF format).

5) ಹೊಲಿಗೆ ತರಬೇತಿ ಪ್ರಮಾಣ ಪತ್ರ ಅಥವಾ ಆಯಾ ಗ್ರಾಮ ಪಂಚಾಯತಿಯ ಅಧ್ಯಕ್ಷರು/ಪಂಚಾಯತ್ ಅಭಿವೃದ್ಧಿ ಅಧಿಕಾರಿಯವರಿಂದ ಹೊಲಿಗೆ (ಟೈಲರಿಂಗ್) ವೃತ್ತಿ, ಬಡಗಿ, ಗಾರೆ, ಕ್ಷೌರಿಕ, ಕುಲುಮೆ, ಕಲ್ಲುಕುಟುಕ & ದೋಬಿ ಕಸುಬು ಮಾಡುತ್ತಿರುವ ಬಗ್ಗೆ ದೃಢೀಕರಣ ಪತ್ರ (in PDF format).

ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಸಲ್ಲಿಸಿದ ನಂತರ ಅರ್ಜಿ ಹಾಗೂ ಅಪ್‌ಲೋಡ್ ಮಾಡಿರುವ ದಾಖಲೆಗಳ ಪ್ರತಿಗಳನ್ನು ಈ ಕಛೇರಿಗೆ ಸಲ್ಲಿಸುವುದು.

**ಆಯ್ಕೆ ಪ್ರಕ್ರಿಯೆ:** ನಿಗದಿಪಡಿಸಿರುವ ಗುರಿಗಿಂತ ಅಧಿಕ ಅರ್ಹ ಅರ್ಜಿಗಳು ಸ್ವೀಕೃತವಾಗಿದ್ದಲ್ಲಿ, ಲಾಟರಿ ಮೂಲಕ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು.

ಹೆಚ್ಚಿನ ಮಾಹಿತಿಗಾಗಿ **ಉಪ ನಿರ್ದೇಶಕರು(ಗ್ರಾ.ಕೈ)**, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಜಿಲ್ಲಾ ಕೈಗಾರಿಕಾ ಕೇಂದ್ರ, ಕೋಲಾರ ಜಿಲ್ಲೆ ರವರ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

ಉಪ ನಿರ್ದೇಶಕರು(ಗ್ರಾ.ಕೈ)
ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ
ಜಿ.ಕೈ.ಕೇ, ಕೋಲಾರ